ಆರ್ಥೋಪಾಯ ಆಗ್ರವಧನ ಹಾಗೂ ಓವರ್‌ಡ್ರಾಫ್ಟ್ ಸೌಲಭ್ಯಗಳನ್ನೊದಗಿಸುವಲ್ಲಿ ಕೆಲವು ನಿರ್ಭಂದನೆಗಳನ್ನು ವಿಧಿಸಿರುವುದರಿಂದ ಕೆಲವೊಂದು ಹೆಚ್ಚು ಪೊತ್ತದ ಪಾವತಿಗಳನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುತ್ತಿದೆ. ಆದರೂ ಸಹ ಮಾನ್ಯ ಸದಸ್ಯರು ನೀಡಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು ಮತ್ತು ಖಜಾನೆಯಿಂದ ಆದಷ್ಟು ಜಾಗ್ರತೆಯಾಗಿ ಹಣವನ್ನು ಬಿಡುಗಡೆ ಮಾಡಲಾಗುವುದು.

ಸಂಬಂಧಿಸಿದಂತೆ ನಿರ್ದಿಷ್ಟ ವಿವರಗಳನ್ನು ಮಾನ್ಯ ಸದಸ್ಯರು ನೀಡಿದಲ್ಲಿ ಅಂತಹ ಪಾವತಿಗಳನ್ನು ಖಾತರಿಗೊಳಿಸಲಾಗುವುದು.

ಅಧ್ಯಕ್ಷರು.— ಈಗ ವಿಧೇಯಕಗಳನ್ನು ಮಂಡಿಸುವುದು.

ಶಾಸನ ರಚನಾ ಕಲಾಪಗಳು

(೧) ೧೯೮೮ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).— ಮಾನ್ಯ ಅಧ್ಯಕ್ಷರೇ, ೧೯೮೮ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ,— ''೧೯೮೮ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).— ಮಾನ್ಯ ಅಧ್ಯಕ್ಷರೇ, ೧೯೮೮ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ. *

(೨) ೧೯೮೮ರ ಕರ್ನಾಟಕ ಕೃಷಿ ಉತ್ಪನ್ನಗಳ ಮಾರಾಟ (ನಿಯಂತ್ರಣ) (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ. ಬಿ. ಪುಲ್ಲಪ್ಪ (ನಿಯಂತ್ರಿತ ಮಾರುಕಟ್ಟೆ ಮತ್ತು ಖಿಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು) — ಮಾನ್ಯ ಅಧ್ಯಕ್ಷರೇ, ೧೯೮೮ರ ಕರ್ನಾಟಕ ಕೃಷಿ ಉತ್ಪನ್ನಗಳ ಮಾರಾಟ (ನಿಯಂತ್ರಣ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೮ರ ಕರ್ನಾಟಕ ಕೃಷಿ ಉತ್ಪನ್ನಗಳ ಮಾರಾಟ (ನಿಯಂತ್ರಣ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

---

* ANNEXURE